# ಭಾರತ ಒಕ್ಕೂಟ ವ್ಯವಸ್ಥೆಯಲ್ಲಿನ ಇತ್ತೀಚಿನ ಪ್ರವೃತ್ತಿಗಳು: ಒಂದು ವಿಶ್ಲೇಷಣೆ

**ಶಿವಣ್ಣ***

**DOI: https://doi.org/10.5281/zenodo.22301835**

**ABSTRACT**

ಭಾರತವು ವೈವಿಧ್ಯತೆಯನ್ನು ಹೊಂದಿರುವ ವಿಶಾಲವಾದಂತಹ ರಾಜ್ಯವಾಗಿದ್ದು, ಈ ವೈವಿಧ್ಯತೆಯೇ ಜೀವಾಳವಾಗಿದೆ. ಇದನ್ನು ಉಳಿಸಿ ಬೆಳೆಸಿಕೊಂಡು ಹೋಗುವುದರ ಜೊತೆಗೆ ಭಾರತದ ಐಕ್ಯತೆ ಮತ್ತು ಸಮಗ್ರತೆಯನ್ನು ಕಾಪಾಡಿಕೊಂಡು ಹೋಗಬೇಕೆನ್ನುವ ಹಿನ್ನೆಲೆಯಲ್ಲಿ ಸಂವಿಧಾನ ರಚನಾಕಾರರು ಸಂವಿಧಾನದ ಯಾವ ಭಾಗದಲ್ಲೂ ಸಂಯುಕ್ತ ಎಂಬ ಪದವನ್ನು ಬಳಸದೆ 'ಒಕ್ಕೂಟ ವ್ಯವಸ್ಥೆ'ಯನ್ನು ಸ್ಥಾಪಿಸಿದರು. ಒಕ್ಕೂಟ ತತ್ವಕ್ಕನುಗುಣವಾಗಿ ಸಂವಿಧಾನಾತ್ಮಕವಾಗಿಯೇ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನಡುವಣ ಅಧಿಕಾರ ಸಂಬಂಧವನ್ನು ಕುರಿತು ಸ್ಪಷ್ಟವಾಗಿ ನಮೂದಿಸಲಾಗಿದೆ. ಈ ಸಂಬಂಧಗಳಲ್ಲಿ 60ರ ದಶಕದವರೆಗೂ ಕೇಂದ್ರ ಮತ್ತು ರಾಜ್ಯಗಳಲ್ಲಿ ಒಂದೇ ಪಕ್ಷದ ಅಧಿಕಾರವಿರುವವರೆಗೆ ಕೇಂದ್ರ-ರಾಜ್ಯಗಳ ಮಧ್ಯೆ ಯಾವುದೇ ಸಂಘರ್ಷವಿಲ್ಲದೆ ಸಹಕಾರಾತ್ಮಕವಾದಂತಹ ಒಕ್ಕೂಟ ವ್ಯವಸ್ಥೆಯಾಗಿತ್ತು. ಆದರೆ ಕಾಲಾನಂತರದಲ್ಲಿ ಬೇರೆ ಬೇರೆ ರಾಷ್ಟ್ರೀಯ ಪಕ್ಷಗಳು ಮತ್ತು ಪ್ರಾದೇಶಿಕ ಪಕ್ಷಗಳು ಪ್ರವರ್ಧಮಾನಕ್ಕೆ ಬಂದು ರಾಜ್ಯಗಳಲ್ಲಿ ಅಧಿಕಾರಕ್ಕೇರಿದ ನಂತರ, ಸಹಕಾರಾತ್ಮಕವಾದಂತಹ ಒಕ್ಕೂಟ ವ್ಯವಸ್ಥೆ ಸಂಘರ್ಷಾತ್ಮಕ ವ್ಯವಸ್ಥೆಯಾಗಿ ಪರಿವರ್ತನೆಗೊಂಡಿದೆ. ಅದರಲ್ಲೂ ಇತ್ತೀಚಿನ ದಿನಗಳಲ್ಲಿ ಒಕ್ಕೂಟ ವ್ಯವಸ್ಥೆಯಲ್ಲಿ ಕೇಂದ್ರ ಮತ್ತು ರಾಜ್ಯಗಳ ಸಂಬಂಧಗಳಲ್ಲಿ ತೀವ್ರ ತೆರನಾದಂತಹ ಸಂಘರ್ಷಗಳು ಏರ್ಪಟ್ಟಿರುವ ಹಿನ್ನೆಲೆಯಲ್ಲಿ, ಅವುಗಳ ಸಂಬಂಧಗಳಲ್ಲಿನ ಸಂಘರ್ಷಗಳಿಗೆ ಕಾರಣಗಳೇನು ಎಂಬುದನ್ನು ತಿಳಿಯುವ ಹಿನ್ನೆಲೆಯಲ್ಲಿ ಈ ಲೇಖನವು ಮಹತ್ವವನ್ನು ಪಡೆಯುತ್ತದೆ.

**KEYWORDS**: ಒಕ್ಕೂಟ ವ್ಯವಸ್ಥೆ, ವೈವಿಧ್ಯತೆ, ಏಕತೆ, ಕೇಂದ್ರ-ರಾಜ್ಯಗಳ ಸಂಬಂಧಗಳು.

* **ಡಾ. ಶಿವಣ್ಣ**, ಸಹ ಪ್ರಾಧ್ಯಾಪಕರು, ರಾಜ್ಯಶಾಸ್ತ್ರ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು, ಚಿತ್ರದುರ್ಗ.

**ಪೀಠಿಕೆ:**

ಸ್ವಾತಂತ್ರ್ಯ ಪೂರ್ವದ ಬ್ರಿಟಿಷ್ ಆಡಳಿತದ ಅನುಭವದ ಆಧಾರದ ಮೇಲೆ ವೈವಿಧ್ಯತೆಯನ್ನು ಹೊಂದಿರುವ ಭಾರತಕ್ಕೆ ಬ್ರಿಟನ್ನಿನ ಏಕಾತ್ಮಕ ವ್ಯವಸ್ಥೆ ಸೂಕ್ತವಲ್ಲವೆಂಬುದನ್ನು ಮನಗಂಡಂತಹ ಸಂವಿಧಾನ ನಿರ್ಮಾತೃಗಳು ಅಮೇರಿಕಾ ಮಾದರಿಯ ನೈಜ ಸಂಯುಕ್ತ ವ್ಯವಸ್ಥೆಯನ್ನು ಅಳವಡಿಸಿಕೊಳ್ಳುವ ಪ್ರಯತ್ನವನ್ನು ಮಾಡಿದರು. ಆದರೆ ಸ್ವತಂತ್ರ ಚಳುವಳಿ ಮತ್ತು ರಾಷ್ಟ್ರ ವಿಭಜನೆಯ ಸಂದರ್ಭದಲ್ಲಾದ ಕಹಿ ಘಟನೆಗಳ ಪರಿಣಾಮವಾಗಿ ಅಮೆರಿಕಾ ಸಂಯುಕ್ತ ಸಂಸ್ಥಾನದ ಸಂಯುಕ್ತ ವ್ಯವಸ್ಥೆಗಿಂತ ಭಿನ್ನವಾದಂತಹ ಕೆನಡಾ ಮಾದರಿಯ ಸಂಯುಕ್ತ ವ್ಯವಸ್ಥೆಯನ್ನು ಅಳವಡಿಸಿಕೊಂಡರು. ಇಲ್ಲಿ ಶಾಸನೀಯ, ಆಡಳಿತಾತ್ಮಕ ಮತ್ತು ಹಣಕಾಸಿಗೆ ಸಂಬಂಧಿಸಿದ ಅಧಿಕಾರಗಳಲ್ಲಿ ಕೇಂದ್ರಕ್ಕೆ ಹೆಚ್ಚು ಅಧಿಕಾರವಿದ್ದು, ರಾಜ್ಯಗಳಿಗೆ ಕಡಿಮೆ ಅಧಿಕಾರಗಳಿವೆ. ಆದುದರಿಂದಲೇ ಕೆ.ಸಿ. ವ್ಹೀರ್‌ರವರು ಭಾರತದಲ್ಲಿ 'ಅರೆಸಂಯುಕ್ತಾತ್ಮಕ ವ್ಯವಸ್ಥೆ' ಇದೆ ಎಂದಿದ್ದಾರೆ.

ಈ ಅಧಿಕಾರಗಳನ್ನೇ ಬಳಸಿಕೊಂಡು ರಾಜ್ಯ ಸರ್ಕಾರಗಳನ್ನು ನಿಯಂತ್ರಿಸುವ, ದುರ್ಬಲಗೊಳಿಸುವ ಮತ್ತು ಅವುಗಳ ಅಧಿಕಾರದಲ್ಲಿ ಹಸ್ತಕ್ಷೇಪ ಮಾಡುವ ಪ್ರವೃತ್ತಿ 1960ರ ದಶಕದಿಂದಲೂ ಬಂದಿದ್ದು, ಇದು ಕೇಂದ್ರ ಮತ್ತು ರಾಜ್ಯಗಳ ಸಂಘರ್ಷಕ್ಕೆ ಎಡೆಮಾಡಿಕೊಟ್ಟಿದೆ. ಈ ಸಂಘರ್ಷ ನಿವಾರಣೆಗೆ ಹಲವಾರು ಸಮಿತಿ/ ಆಯೋಗಗಳನ್ನು ನೇಮಿಸಿ ವರದಿ ನೀಡಿದ್ದರೂ ಅವುಗಳ ಶಿಫಾರಸ್ಸುಗಳು ಮಾತ್ರ ಜಾರಿಯಾಗದೆ ಸಂಘರ್ಷ ಮತ್ತಷ್ಟು ಉಲ್ಬಣಗೊಂಡಿದೆ. ಅದರಲ್ಲೂ ಪಕ್ಷ ರಾಜಕೀಯ ಮುನ್ನೆಲೆಗೆ ಬಂದಿರುವ ಇತ್ತೀಚಿನ ದಿನಗಳಲ್ಲಿ ಭಾರತದ ಸಂಯುಕ್ತ ವ್ಯವಸ್ಥೆಯಲ್ಲಿ ಕೇಂದ್ರ ಮತ್ತು ರಾಜ್ಯಗಳ ಸಂಬಂಧಗಳಲ್ಲಿ ಸಂಘರ್ಷ ತಾರಕಕ್ಕೇರಿದ್ದು, ಹೊಸ ಪ್ರವೃತ್ತಿಗೆ ಕಾರಣವಾಗಿರುವ ಈ ಸಂದರ್ಭದಲ್ಲಿ ಈ ಹೊಸ ಬೆಳವಣಿಗೆ ಅಥವಾ ಪ್ರವೃತ್ತಿಗೆ ಕಾರಣವಾಗಿರುವ ಅಂಶಗಳ ಹಿನ್ನೆಲೆಯಲ್ಲಿ ಈ ಲೇಖನ ಪ್ರಸ್ತುತವೆನಿಸುತ್ತದೆ.

**ಸಂಶೋಧನಾ ವಿಧಾನ:**

**ಅಧ್ಯಯನದ ಉದ್ದೇಶಗಳು:**

1. ಭಾರತದ ಸಂವಿಧಾನದ ರಚನಾಕಾರರ ದೃಷ್ಟಿಯಲ್ಲಿ ಒಕ್ಕೂಟ ವ್ಯವಸ್ಥೆಯ ರಚನೆಯ ಉದ್ದೇಶವನ್ನು ಅರಿಯುವುದು.

2. ಭಾರತದ ಒಕ್ಕೂಟ ವ್ಯವಸ್ಥೆಯ ಸ್ವರೂಪವನ್ನು ಅರಿಯುವುದು.

3. ಭಾರತದ ಒಕ್ಕೂಟ ವ್ಯವಸ್ಥೆಯಲ್ಲಿ ಕೇಂದ್ರ ಮತ್ತು ರಾಜ್ಯಗಳ ಸಂಬಂಧಗಳಲ್ಲಿ ಸಂಘರ್ಷಕ್ಕೆ ಕಾರಣವಾಗಿರುವ ಅಂಶಗಳನ್ನು ಗುರುತಿಸುವುದು.

4. ಇತ್ತೀಚಿನ ದಿನಗಳಲ್ಲಿ ಭಾರತದ ಒಕ್ಕೂಟ ವ್ಯವಸ್ಥೆಯಲ್ಲಿನ ಬೆಳವಣಿಗೆಗಳು/ ಪ್ರವೃತ್ತಿಗಳನ್ನು ಗುರುತಿಸುವುದು.

5. ಈ ಹೊಸ ಪ್ರವೃತ್ತಿಗಳಿಗೆ ಪರಿಹಾರಗಳನ್ನು ಗುರುತಿಸುವುದು.

**ಆಧಾರ:** ಈ ಲೇಖನವು ದ್ವಿತೀಯ ಮಾಹಿತಿಯನ್ನು ಆಧರಿಸಿದ್ದು, ವಿವಿಧ ಸಾಹಿತ್ಯ ಅಧ್ಯಯನ, ವರದಿಗಳು, ಪುಸ್ತಕಗಳು, ಸಂಶೋಧನಾ ಲೇಖನಗಳು, ಮಾಸಪತ್ರಿಕೆ, ದಿನಪತ್ರಿಕೆಗಳಲ್ಲಿನ ಲೇಖನ ಮತ್ತು ವರದಿಗಳನ್ನು ಆಧರಿಸಿದೆ.

**ಸಂಯುಕ್ತ ವ್ಯವಸ್ಥೆ ಅಥವಾ ಒಕ್ಕೂಟ ವ್ಯವಸ್ಥೆಯ ಅರ್ಥ:**

ಒಂದೇ ಸಂದರ್ಭದಲ್ಲಿ ಒಂದೇ ಪ್ರದೇಶದ ಮೇಲೆ ಒಂದಕ್ಕಿಂತ ಹೆಚ್ಚು ಸರ್ಕಾರಗಳು ಅಧಿಕಾರ ಚಲಾಯಿಸುವುದನ್ನು ಸಂಯುಕ್ತ ಅಥವಾ ಒಕ್ಕೂಟ ವ್ಯವಸ್ಥೆ ಎಂದು ಕರೆಯಲಾಗುತ್ತದೆ.

**ಭಾರತದ ಸಂಯುಕ್ತ ವ್ಯವಸ್ಥೆ:**

ಭಾರತ ಸಂವಿಧಾನವು ಅಮೇರಿಕಾ ಸಂವಿಧಾನದಲ್ಲಿನ ಸಂಯುಕ್ತ ಸರ್ಕಾರದ ತತ್ವಗಳು ಹಾಗೂ ಬ್ರಿಟಿಷ್ ಸಂವಿಧಾನದಲ್ಲಿನ ಏಕಾತ್ಮಕ ಸರ್ಕಾರದ ತತ್ವಗಳೆರಡನ್ನೂ ಹೊಂದಿದೆ. ಭಾರತ ಸಂವಿಧಾನದ 1ನೇ ವಿಧಿಯು ಭಾರತವನ್ನು "ರಾಜ್ಯಗಳ ಒಕ್ಕೂಟ" ಎಂದು ತಿಳಿಸುತ್ತದೆ. ಸಂವಿಧಾನದಲ್ಲೆಲ್ಲೂ ಸಂಯುಕ್ತ ಸರ್ಕಾರ ಎಂಬ ಪದವನ್ನು ಉಪಯೋಗಿಸಿಲ್ಲವಾದರೂ, ಸಂವಿಧಾನವು ಸಂಯುಕ್ತ ಸರ್ಕಾರದ ಮೂಲ ತತ್ವಗಳನ್ನು ಅಂಗೀಕರಿಸಿರುವುದರಿಂದ ಇದನ್ನು ಸಂಯುಕ್ತ ರಾಜ್ಯ ಮತ್ತು ಸಂವಿಧಾನವನ್ನು ಸಂಯುಕ್ತ ಸಂವಿಧಾನವೆಂದು ಪರಿಗಣಿಸಬಹುದು. ಪ್ರಸ್ತುತ ಭಾರತವು 29 ರಾಜ್ಯ ಮತ್ತು 9 ಕೇಂದ್ರಾಡಳಿತ ಪ್ರದೇಶಗಳನ್ನು ಒಳಗೊಂಡಿದೆ.

**ಸಂವಿಧಾನ ರಚನಾಕಾರರ ದೃಷ್ಟಿಯಲ್ಲಿ ಭಾರತ ಒಕ್ಕೂಟ ವ್ಯವಸ್ಥೆಯ ರಚನೆಯ ಸ್ವರೂಪದ ಉದ್ದೇಶ:**

ಭಾರತ ಸಂವಿಧಾನ ರಚನೆಯ ಸಂದರ್ಭದಲ್ಲಿ ಬ್ರಿಟನ್ ಸಂವಿಧಾನದ ಏಕಾತ್ಮಕ ವ್ಯವಸ್ಥೆ ಮತ್ತು ಅಮೇರಿಕಾದ ಸಂಯುಕ್ತ ವ್ಯವಸ್ಥೆ ಎರಡೂ ಮಾದರಿಗಳು ಸಂವಿಧಾನ ರಚನಾಕಾರರ ಮುಂದೆ ಇದ್ದವು. ವಸಾಹತುಶಾಹಿ ಆಳ್ವಿಕೆಯ ಅನುಭವದ ಆಧಾರದ ಮೇಲೆ ವೈವಿಧ್ಯತೆಯನ್ನು ಹೊಂದಿದ ಭಾರತಕ್ಕೆ ಸಂಯುಕ್ತ ವ್ಯವಸ್ಥೆಯೇ ಸೂಕ್ತ ಎಂಬ ತೀರ್ಮಾನಕ್ಕೆ ಬಂದು ನೈಜ ಮಾದರಿಯ ಸಂಯುಕ್ತ ವ್ಯವಸ್ಥೆಯನ್ನು ಅಳವಡಿಸುವ ಉದ್ದೇಶ ಹೊಂದಿದ್ದರು. ಆದರೆ ಉಪಖಂಡದ ವಿಭಜನೆಯ ಸಂದರ್ಭದಲ್ಲಾದಂತಹ ಕಹಿ ಘಟನೆಗಳು, ವಿಚ್ಛಿದ್ರಕಾರಕ ಶಕ್ತಿಗಳ ಭಯ, ಕೋಮುಗಲಭೆಗಳು, ರಾಷ್ಟ್ರ ವಿರೋಧಿ ಪ್ರಾಂತೀಯತೆ ಹಾಗೂ ಕೋಮುವಾದವು ಕೇಂದ್ರೀಕೃತ ಒಕ್ಕೂಟವನ್ನು ರಚಿಸಲು ಕಾರಣವಾಯಿತು.

**ಭಾರತದ ಒಕ್ಕೂಟ ವ್ಯವಸ್ಥೆಯ ಸ್ವರೂಪ:**

ಒಕ್ಕೂಟ ತತ್ವಕ್ಕನುಗುಣವಾಗಿ ಭಾರತದಲ್ಲಿ ಸಂವಿಧಾನಾತ್ಮಕವಾಗಿಯೇ ಅಧಿಕಾರಗಳನ್ನು ಸಂವಿಧಾನದ 7ನೇ ಅನುಸೂಚಿಯಲ್ಲಿ ಕೇಂದ್ರ ಪಟ್ಟಿ, ರಾಜ್ಯ ಪಟ್ಟಿ

ಹಾಗೂ ಸಮವರ್ತಿ ಪಟ್ಟಿ ಎಂಬ ಮೂರು ಪಟ್ಟಿಗಳಲ್ಲಿ ಹಂಚಿಕೆ ಮಾಡಲಾಗಿದ್ದು, ಪ್ರಸ್ತುತ ಕೇಂದ್ರ ಪಟ್ಟಿಯಲ್ಲಿ 100 ವಿಷಯಗಳು, ರಾಜ್ಯ ಪಟ್ಟಿಯಲ್ಲಿ 61 ವಿಷಯಗಳು ಮತ್ತು ಸಮವರ್ತಿ ಪಟ್ಟಿಯಲ್ಲಿ 52 ವಿಷಯಗಳಿದ್ದು, ಉಳಿಕೆ ಅಧಿಕಾರಗಳನ್ನು ಕೇಂದ್ರಕ್ಕೆ ನೀಡಲಾಗಿದೆ. ಕೇಂದ್ರ ಪಟ್ಟಿಯು ರಕ್ಷಣೆ, ವಿದೇಶಾಂಗ ವ್ಯವಹಾರ, ಹಣಕಾಸು, ಆದಾಯ ತೆರಿಗೆ, ರೈಲ್ವೆ, ವಿಮಾನಯಾನ, ಯುದ್ಧ ಮತ್ತು ಶಾಂತಿ, ವಿದೇಶಿ ವ್ಯಾಪಾರ ಮುಂತಾದ ಪ್ರಮುಖ ವಿಷಯಗಳನ್ನೊಳಗೊಂಡಿದೆ. ರಾಜ್ಯ ಪಟ್ಟಿಯು ಸಾರ್ವಜನಿಕ ಶಿಸ್ತು, ಪೊಲೀಸ್, ಬಂದೀಖಾನೆಗಳು, ಸಾರ್ವಜನಿಕ ಆರೋಗ್ಯ, ಸ್ಥಳೀಯ ಸರ್ಕಾರ, ವ್ಯವಸಾಯ, ಪಶುಸಂಗೋಪನೆ ಮುಂತಾದ ವಿಷಯಗಳನ್ನು ಒಳಗೊಂಡಿದೆ. ಸಮವರ್ತಿ ಪಟ್ಟಿಯು ಅಪರಾಧ ವಿಧಾನ, ಮುನ್ನೆಚ್ಚರಿಕೆ ಬಂಧನ, ವಿವಾಹ, ವಿಚ್ಛೇದನ, ಅರಣ್ಯ, ವನ್ಯಜೀವಿಗಳು, ಜನಸಂಖ್ಯಾ ನಿಯಂತ್ರಣದಂತಹ ವಿಷಯಗಳನ್ನು ಒಳಗೊಂಡಿದೆ. ಈ ಅಧಿಕಾರಗಳಲ್ಲಿ ಕೇಂದ್ರ ಮತ್ತು ರಾಜ್ಯಗಳ ಸಂಬಂಧಗಳು ವ್ಯಕ್ತವಾಗುತ್ತವೆ.

ಕೇಂದ್ರ ಹಾಗೂ ರಾಜ್ಯ ಸಂಬಂಧಗಳನ್ನು ಶಾಸನೀಯ, ಆಡಳಿತಾತ್ಮಕ ಮತ್ತು ಹಣಕಾಸಿನ ಸಂಬಂಧಗಳೆಂದು ವಿಂಗಡಿಸಲಾಗಿದ್ದು, ಶಾಸನೀಯ ಸಂಬಂಧಗಳನ್ನು ಸಂವಿಧಾನದ 7ನೇ ಅನುಸೂಚಿಯಲ್ಲಿ ಹಾಗೂ 11ನೇ ಭಾಗದ ಒಂದನೇ ಅಧ್ಯಾಯದಲ್ಲಿ ನಮೂದಿಸಿರುವ 245 ರಿಂದ 255ರ ವರೆಗಿನ ವಿಧಿಗಳು ಹಾಗೂ VIನೇ ಭಾಗದ 200 ಮತ್ತು 201ನೇ ವಿಧಿಗಳಲ್ಲಿ ಕಾಣಬಹುದು.

ಕೇಂದ್ರ ಮತ್ತು ರಾಜ್ಯಗಳ ನಡುವಿನ ಆಡಳಿತಾತ್ಮಕ ಸಂಬಂಧಗಳನ್ನು ಸಂವಿಧಾನದ XIನೇ ಭಾಗದ ಎರಡನೇ ಅಧ್ಯಾಯದಲ್ಲಿ 256ನೇ ವಿಧಿಯಿಂದ 263ನೇ ವಿಧಿಗಳು ಹಾಗೂ 301, 302, 303, 304ನೇ ವಿಧಿಗಳು, 355, 353, 339(2), 350(A) ವಿಧಿಗಳಲ್ಲಿ ಕಾಣಬಹುದು.

ಹಾಗೆಯೇ ಕೇಂದ್ರ ರಾಜ್ಯಗಳ ಹಣಕಾಸಿಗೆ ಸಂಬಂಧಿಸಿದ ಸಂಬಂಧಗಳನ್ನು ಸಂವಿಧಾನದ 12ನೇ ಭಾಗದಲ್ಲಿರುವ 268 ರಿಂದ 286ನೇ ವಿಧಿಗಳಲ್ಲಿ ಕಾಣಬಹುದು.

**ಭಾರತದ ಒಕ್ಕೂಟ ವ್ಯವಸ್ಥೆಯಲ್ಲಿ ಕೇಂದ್ರ ಮತ್ತು ರಾಜ್ಯಗಳ ನಡುವಣ ಸಂಬಂಧಗಳಲ್ಲಿ ಸಂಘರ್ಷಕ್ಕೆ ಕಾರಣವಾಗಿರುವಂತಹ ಅಂಶಗಳು:**

1. 200, 201, 355, 356, 270, 271, 275, 279(A), 280, 282ನೇ ವಿಧಿಗಳಲ್ಲಿ ಅಡಕವಾಗಿರುವ ಅಂಶಗಳು ಕೇಂದ್ರಕ್ಕೆ ಹೆಚ್ಚಿನ ಅಧಿಕಾರಗಳನ್ನು ನೀಡಿವೆ. ಇವುಗಳನ್ನು ಬಳಸಿಕೊಂಡು ರಾಜ್ಯ ಸರ್ಕಾರಗಳ ಮಧ್ಯೆ ತಾರತಮ್ಯ ನೀತಿಯನ್ನು ಕೇಂದ್ರ ಅನುಸರಿಸುತ್ತದೆ ಎನ್ನುವ ಹಿನ್ನೆಲೆ ಸಂಘರ್ಷಕ್ಕೆ ಕಾರಣವಾಗಿದೆ. ಈ ಸಂಘರ್ಷ ಇಂದು ನಿನ್ನೆಯದಲ್ಲ, ಇದು 1960ರ ದಶಕದಲ್ಲಿ ಪ್ರಾರಂಭವಾಗಿ 2014 ರಿಂದೀಚೆಗೆ ತಾರಕಕ್ಕೇರಿದೆ.

**ಇತ್ತೀಚಿನ ದಿನಗಳಲ್ಲಿ ಭಾರತದ ಒಕ್ಕೂಟ ವ್ಯವಸ್ಥೆಯಲ್ಲಿನ ಬೆಳವಣಿಗೆಗಳು/ ಪ್ರವೃತ್ತಿಗಳು:**

**ರಾಜ್ಯಪಾಲ ಮತ್ತು ಮುಖ್ಯಮಂತ್ರಿಗಳ ನಡುವಿನ ಸಂಘರ್ಷ:** ಇತ್ತೀಚಿನ ದಿನಗಳಲ್ಲಿ ಒಕ್ಕೂಟ ವ್ಯವಸ್ಥೆಯಲ್ಲಿ ಪ್ರಮುಖ ಪ್ರವೃತ್ತಿ ಎಂದರೆ ರಾಜ್ಯಪಾಲ ಮತ್ತು ಮುಖ್ಯಮಂತ್ರಿಗಳ ನಡುವಿನ ಸಂಘರ್ಷ ತಾರಕಕ್ಕೇರಿರುವುದು. 2020 ರಿಂದ ಈಚೆಗೆ ಬಿಜೆಪಿಯೇತರ ಪಕ್ಷಗಳು ಅಧಿಕಾರಕ್ಕೆ ಬಂದಿರುವ ರಾಜ್ಯಗಳಾದ ಕರ್ನಾಟಕ, ಪಶ್ಚಿಮಬಂಗಾಳ, ತೆಲಂಗಾಣ, ಜಾರ್ಖಂಡ್, ಕೇರಳ, ಪಂಜಾಬ್, ತಮಿಳುನಾಡು ರಾಜ್ಯಗಳಲ್ಲಿ ರಾಜ್ಯಪಾಲರುಗಳು ರಾಜ್ಯ ಸರ್ಕಾರದಿಂದ ಅಂಗೀಕಾರವಾಗಿ ತಮ್ಮ ಸಹಿಗೆ ಬಂದ ಮಸೂದೆಗಳನ್ನು ವಿಲೇವಾರಿ ಮಾಡದೆ ವರ್ಷಗಳ ಕಾಲ ತಮ್ಮ ಬಳಿಯೇ ಇಟ್ಟುಕೊಂಡಿರುವುದು, ರಾಜ್ಯ ಸರ್ಕಾರಗಳು ದೈನಂದಿನ ಕಾರ್ಯಗಳನ್ನು ಮಾಡದಿರುವ ಹಾಗೂ ತನ್ನ ಕಾರ್ಯಸೂಚಿಗಳನ್ನು ಜಾರಿಗೆ ತರದಿರುವ ಮಟ್ಟಿಗೆ ಅವುಗಳನ್ನು ಕಟ್ಟಿಹಾಕಲು ರಾಜ್ಯಪಾಲರ ಅಧಿಕಾರ ಬಳಕೆಯಾಗುತ್ತಿದ್ದು ಬಿಕ್ಕಟ್ಟಿಗೆ ಕಾರಣವಾಗಿದೆ.

**ಸುಪ್ರೀಂ ಕೋರ್ಟ್ ತೀರ್ಪು ಮತ್ತು ರಾಜ್ಯಪಾಲರ ಪಾತ್ರ:** ರಾಜ್ಯಪಾಲರು ರಾಜ್ಯ ಸರ್ಕಾರದ ಮುಖ್ಯಸ್ಥರಾದ್ದರಿಂದ ರಾಜ್ಯದ ಎಲ್ಲಾ ಕಾಯಿದೆ ಕಟ್ಟಳೆಗಳು, ನೇಮಕಾತಿ ಆದೇಶಗಳು, ವಿವಿಧ ಆದೇಶಗಳು ಅನುಷ್ಠಾನ ಯೋಗ್ಯವಾಗುವುದು ರಾಜ್ಯಪಾಲರ ಅಂಕಿತ ಬಿದ್ದ ನಂತರವೇ. ಇವೆಲ್ಲವೂ ಮುಖ್ಯಮಂತ್ರಿ ನೇತೃತ್ವದ ಸಚಿವ ಸಂಪುಟದ ಒಪ್ಪಿಗೆ ಪಡೆದು, ನಂತರದಲ್ಲಿ ವಿಧಾನಸಭೆ ಹಾಗೂ ವಿಧಾನ ಪರಿಷತ್ತಿನಲ್ಲಿ ಚರ್ಚೆಯಾಗಿ ಅನುಮೋದನೆಗೊಂಡ ಬಳಿಕವೇ ರಾಜ್ಯಪಾಲರ ಬಳಿಗೆ ಬರುತ್ತವೆ. ಅವುಗಳಿಗೆ ಅಂಕಿತ ಹಾಕುವುದು 200ನೇ ವಿಧಿಯ ಪ್ರಕಾರ ರಾಜ್ಯಪಾಲರ ಕರ್ತವ್ಯ. ಆದರೆ ಇಂತಿಷ್ಟೇ ಅವಧಿಯಲ್ಲಿ ಮಸೂದೆಗಳನ್ನು ವಿಲೇವಾರಿ ಮಾಡಬೇಕು ಎಂದು ಸಂವಿಧಾನವು ಕಾಲಮಿತಿ ನಿಗದಿ ಮಾಡಿಲ್ಲ. ಇದನ್ನೇ ಬಳಸಿಕೊಂಡು ಬಿಜೆಪಿಯೇತರ ಪಕ್ಷಗಳು ಅಧಿಕಾರದಲ್ಲಿರುವ ರಾಜ್ಯಗಳ ರಾಜ್ಯಪಾಲರು ಸಹಿ ಹಾಕದೇ ಹಾಗೆ ಇಟ್ಟುಕೊಂಡು ರಾಜ್ಯ ಸರ್ಕಾರಗಳನ್ನು ಇಕ್ಕಟ್ಟಿಗೆ ಸಿಲುಕಿಸಿದ್ದು, ತಮಿಳುನಾಡು ಸರ್ಕಾರವು ರಾಜ್ಯಪಾಲರ ಕ್ರಮವನ್ನು ಕೊನೆಗೆ ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸಿತು. ಇದಕ್ಕೆ ಸುಪ್ರೀಂ ಕೋರ್ಟ್ ಏಪ್ರಿಲ್ 8, 2024 ರಂದು ಐತಿಹಾಸಿಕ ತೀರ್ಪನ್ನು ನೀಡಿದ್ದು, ಅಂಕಿತ ಹಾಕುವುದಕ್ಕೆ ರಾಜ್ಯಪಾಲ ಮತ್ತು ರಾಷ್ಟ್ರಪತಿಯವರಿಗೆ ಕಾಲಮಿತಿಯನ್ನು ನಿಗದಿಪಡಿಸಿ ಆದೇಶಿಸಿದೆ. ತೀರ್ಪಿನಲ್ಲಿ "ರಾಜ್ಯಪಾಲರು ಸಮಸ್ಯೆಗೆ ಪರಿಹಾರ ತರುವ, ಸಹಮತ ಮೂಡಿಸುವ ವ್ಯಕ್ತಿಯಾಗಬೇಕು. ಅವರು ತಮ್ಮ ಬುದ್ಧಿಮತ್ತೆ ಮತ್ತು ಪಾಂಡಿತ್ಯದ ಮೂಲಕ ರಾಜ್ಯದ ಆಡಳಿತ ಯಂತ್ರದ ಕೀಲೆಣ್ಣೆಯಂತೆ ವರ್ತಿಸಬೇಕು. ಆಡಳಿತ ಯಂತ್ರ ಸ್ಥಗಿತಗೊಳ್ಳುವಂತೆ ಮಾಡಬಾರದು, ಅವರು ವೇಗವರ್ಧಕ ಆಗಬೇಕು, ಅಡ್ಡಪಡಿಸುವವರಾಗಬಾರದು. ತಾವು ಹೊಂದಿರುವ ಉನ್ನತವಾದ ಸಾಂವಿಧಾನಿಕ ಹುದ್ದೆಯ ಘನತೆಯನ್ನು ಮನಸ್ಸಿನಲ್ಲಿ ಇಟ್ಟುಕೊಂಡು ಅವರು ತಮ್ಮ ಕೆಲಸಗಳನ್ನು ನಿರ್ವಹಿಸಬೇಕು. ರಾಜ್ಯದ ಸಾಂವಿಧಾನಿಕ ಮುಖ್ಯಸ್ಥರಾಗಿ ರಾಜ್ಯಪಾಲರು ಜನರ ಇಚ್ಛೆಗೆ ಮತ್ತು ಅಭಿವೃದ್ಧಿಗೆ ಆದ್ಯತೆ ನೀಡಬೇಕಾದ ಹೊಣೆ ಹೊತ್ತಿದ್ದಾರೆ. ರಾಜ್ಯಪಾಲರು ರಾಜ್ಯದ ಆಡಳಿತ ಯಂತ್ರದ ಜೊತೆ ಹೊಂದಾಣಿಕೆಯಿಂದ

ಕೆಲಸ ಮಾಡಬೇಕು'' ಎಂದು ತೀರ್ಪಿನಲ್ಲಿ ಹೇಳಿದೆ.

**ತೆರಿಗೆ ಹಂಚಿಕೆಯ ತಾರತಮ್ಯದ ವಿವಾದ:**

ಇತ್ತೀಚೆಗೆ ಇಡೀ ದೇಶದ ಗಮನವನ್ನು ಸೆಳೆದ ವಿವಾದವೆಂದರೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನಡುವಿನ ತೆರಿಗೆ ಹಂಚಿಕೆ. ಕೇಂದ್ರ ಸರ್ಕಾರವು ಸಂಗ್ರಹಿಸುವ ಆದಾಯ ತೆರಿಗೆ ಮತ್ತು ಅಬಕಾರಿ ಸುಂಕವನ್ನು ಮಾತ್ರವೇ ಹಣಕಾಸು ಆಯೋಗ ಅನ್ನುವ ಸ್ವಾಯತ್ತ ಸಂಸ್ಥೆಯ ಮೂಲಕ ಒಂದು ನಿರ್ದಿಷ್ಟ ಸೂತ್ರದಡಿ ರಾಜ್ಯಗಳಿಗೆ ಹಂಚುವ ವ್ಯವಸ್ಥೆ ಬಂದಿತು. ರಾಜ್ಯಗಳಿಗೆ ಕೆಲವೇ ಕೆಲವು ವಿಷಯಗಳಲ್ಲಿ ತೆರಿಗೆ ಹಾಕುವ ಹಕ್ಕುಗಳನ್ನು ನೀಡಲಾಯಿತು. 1991ರ ಆರ್ಥಿಕ ಸುಧಾರಣೆಗಳ ನಂತರ ಜಾಗತೀಕರಣದ ಅವಕಾಶಗಳನ್ನು ಬಳಸಿಕೊಳ್ಳಲು ಸಮರ್ಥವಾಗಿದ್ದ ಕೆಲವು ರಾಜ್ಯಗಳು ಪ್ರಗತಿಯಲ್ಲಿ ದಾಪುಗಾಲಿಕ್ಕಿ ತಮ್ಮದೇ ತೆರಿಗೆ ಸಂಪನ್ಮೂಲ ಹೆಚ್ಚಿಸಿಕೊಳ್ಳಲು ಸಾಧ್ಯವಾಯಿತು. ಆ ರಾಜ್ಯಗಳ ಪ್ರಗತಿಯಿಂದಾಗಿ ಕೇಂದ್ರದ ತೆರಿಗೆ ಸಂಪನ್ಮೂಲದ ಗಾತ್ರವೂ ಹಿಗ್ಗಿತು. ಇವೆಲ್ಲ ಆದಾಗಲೂ ಕೇಂದ್ರ, ರಾಜ್ಯಗಳ ತೆರಿಗೆ ಹಂಚಿಕೆಯ ವಿಷಯದಲ್ಲಿ ಮೂಲಭೂತವಾದ ಬದಲಾವಣೆಯೇನೂ ಆಗಲಿಲ್ಲ.

ಹದಿನಾಲ್ಕನೇ ಹಣಕಾಸು ಆಯೋಗ ಹಲವಾರು ಕೇಂದ್ರ ಪ್ರಾಯೋಜಿತ ಯೋಜನೆಗಳನ್ನು ರದ್ದುಪಡಿಸಿ ಒಟ್ಟಾರೆ ಕೇಂದ್ರದಿಂದ ರಾಜ್ಯಗಳಿಗೆ ನೀಡುವ ತೆರಿಗೆ ಹಂಚಿಕೆ ಪ್ರಮಾಣವನ್ನು 32 ರಿಂದ 42ಕ್ಕೆ ಏರಿಸಿತು. ಇದು ರಾಜ್ಯಗಳಿಗೆ ನಿವ್ವಳ ತೆರಿಗೆ ಪಾಲಿನಲ್ಲಿ ಹೆಚ್ಚೇನೂ ಬದಲಾವಣೆ ತರದಿದ್ದರೂ ಬರುವ ಹಣವನ್ನು ತಮ್ಮ ಅಗತ್ಯಕ್ಕೆ ತಕ್ಕಂತೆ ಬಳಸಿಕೊಳ್ಳುವ ವಿಷಯದಲ್ಲಿ ಒಂದಷ್ಟು ಸ್ವಾತಂತ್ರ್ಯವನ್ನು ನೀಡಿದ್ದು, ಈ ದಿಸೆಯಲ್ಲಿ ಆದ ಏಕೈಕ ದೊಡ್ಡ ಬದಲಾವಣೆ ಎನ್ನಬಹುದು. ಇದರ ನಂತರ ಜಾರಿಗೆ ಬಂದಂತಹ ಜಿ.ಎಸ್.ಟಿ. ತೆರಿಗೆ ವ್ಯವಸ್ಥೆಯು ರಾಜ್ಯಗಳಿಗೆ ಇದ್ದ ಕೆಲವೇ ಕೆಲವು ತೆರಿಗೆ ವಿಧಿಸುವ ಅಧಿಕಾರವನ್ನು ಮೊಟಕುಗೊಳಿಸಿ, ರಾಜ್ಯಗಳು ತಮ್ಮ ಅಗತ್ಯಕ್ಕೆ ತಕ್ಕಂತೆ ಹೊಸದಾದ ಯಾವುದೇ ತೆರಿಗೆ ಪರಿಚಯಿಸುವ ಹಕ್ಕನ್ನು ಇಲ್ಲವಾಗಿಸಿತು.

ಕೇಂದ್ರ ಸರ್ಕಾರವು ಸಂಗ್ರಹಿಸುವ ಎಲ್ಲಾ ತರಹದ ತೆರಿಗೆಗಳನ್ನು ಡಿವಿಸಿಬಲ್ ಪೂಲ್ (Divisible Pool) ವ್ಯಾಪ್ತಿಗೆ ತಂದು ರಾಜ್ಯಗಳೊಂದಿಗೆ ಹಂಚಿಕೊಳ್ಳುವ ಉದ್ದೇಶದ ಸಂವಿಧಾನ ತಿದ್ದುಪಡಿಯು ಇಸವಿ 2000ರಲ್ಲಿ ಆಯಿತು. ಆದರೆ ವಿಧಿ 270/271ರ ಅಡಿ ಕೇಂದ್ರ ಸಂಗ್ರಹಿಸುವ ಸೆಸ್ ಮತ್ತು ಸರ್ಚಾರ್ಜ್‌ಗಳನ್ನು ಪೂರ್ತಿಯಾಗಿ ಈ ಹಂಚಿಕೆಯಿಂದ ಹೊರಗಿಡಲಾಯಿತು. ಇದಕ್ಕೂ ಹಿಂದೆ ಇಂತಹ ನಿರ್ಧಾರಗಳನ್ನು ಹಣಕಾಸು ಆಯೋಗದ ಶಿಫಾರಸ್ಸು ಇದ್ದರಷ್ಟೇ ಮಾಡುವ ನೀತಿಯಿತ್ತು. ಈ ನಿರ್ಣಯ ರಾಜ್ಯಗಳ ಪಾಲಿಗೆ ಬಹಳ ದೊಡ್ಡ ಪೆಟ್ಟು ನೀಡಿತು. ಅಲ್ಲಿಂದೀಚೆಗೆ ಕೇಂದ್ರದ ತೆರಿಗೆ ಸಂಗ್ರಹದ ಗಾತ್ರ ಹಿಗ್ಗುತ್ತಲೇ ಬಂದಿದ್ದರೂ, ರಾಜ್ಯಗಳೊಂದಿಗೆ ಹಂಚಿಕೊಳ್ಳುವ ಪಾಲಿನ ಗಾತ್ರ ಮಾತ್ರ ಅದೇ ಪ್ರಮಾಣದಲ್ಲಿ ಹಿಗ್ಗಿಲ್ಲ. ಅದುವೇ ಇಂದಿನ ಕೇಂದ್ರ-ರಾಜ್ಯಗಳ ನಡುವಣ ಸಂಘರ್ಷಕ್ಕೆ ಕಾರಣವಾಗಿದ್ದು, ಹಣಕಾಸು ಆಯೋಗದ ಸೂತ್ರದಡಿ ಹಂಚಿಕೆಯಾಗುವ ತೆರಿಗೆ ನೀತಿಯು ಜನಸಂಖ್ಯೆ

ಮತ್ತು ತಲಾದಾಯದ ಆಧಾರದ ಮೇಲೆ ಬಹುಪಾಲು ರಾಜ್ಯಗಳಿಗೆ ಅನುಕೂಲವಾದರೆ ದೆಹಲಿ ಮತ್ತು ದಕ್ಷಿಣದ ರಾಜ್ಯಗಳಿಗೆ ಇದು ಅನ್ಯಾಯವಾಗಿದೆ.

ಇದರಿಂದ ತೆರಿಗೆ ಹಂಚಿಕೆಯ ಪಾಲನ್ನು ಸರಿಯಾಗಿ ವಿತರಿಸುತ್ತಿಲ್ಲ ಎಂದು ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ನೇತೃತ್ವದಲ್ಲಿ ದೆಹಲಿಯ ಜಂತರ್ ಮಂತರ್‌ನಲ್ಲಿ ಫೆಬ್ರವರಿ 8, 2024 ರಂದು ದೆಹಲಿ ಮುಖ್ಯಮಂತ್ರಿ ಕೇಜ್ರಿವಾಲ್, ಸಿ. ಪಿ.ಐ (ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚೂರಿ, ನ್ಯಾಷನಲ್ ಕಾನ್ಫರೆನ್ಸ್ ನಾಯಕ ಫಾರೂಕ್ ಅಬ್ದುಲ್ಲಾ ಸೇರಿದಂತೆ ಹಲವು ನಾಯಕರು ಪಾಲ್ಗೊಂಡಿದ್ದರು. ಈ ವೇಳೆ ವಿಜಯನ್‌ರವರು "ಭಾರತದ ಒಕ್ಕೂಟ ವ್ಯವಸ್ಥೆಯನ್ನು ಸಂರಕ್ಷಿಸಲು ನಾವೆಲ್ಲರೂ ಇಲ್ಲಿ ಒಗ್ಗೂಡಿದ್ದೇವೆ. ರಾಜ್ಯಗಳಿಗೆ ನ್ಯಾಯಯುತವಾಗಿ ದೊರೆಯಬೇಕಾದುದನ್ನು ಖಾತರಿಪಡಿಸುವ ನಿಟ್ಟಿನಲ್ಲಿ ಹಲವು ಹೋರಾಟವನ್ನು ಆರಂಭಿಸಿದ್ದೇವೆ" ಎಂದರು.

ಇದಕ್ಕಿಂತ ಒಂದು ದಿನ ಮುಂಚೆಯೇ ಕರ್ನಾಟಕ ಕಾಂಗ್ರೆಸ್ ಸರ್ಕಾರದ ಮುಖ್ಯಮಂತ್ರಿ ಮತ್ತು ಅದರ ಸಚಿವ ಸಂಪುಟದ ಸಹೋದ್ಯೋಗಿ ಮಿತ್ರರು 'ದೆಹಲಿ ಚಲೋ' ಹೆಸರಿನಲ್ಲಿ ದೆಹಲಿಯ ಜಂತರ್ ಮಂತರ್‌ನಲ್ಲಿ ಕೇಂದ್ರದ ವಿರುದ್ಧ ಪ್ರತಿಭಟಿಸಿದರು ಮತ್ತು 'X' ನಲ್ಲಿ (ಟ್ವಿಟರ್) ನಡೆದ "ನಮ್ಮ ಹಕ್ಕು ನಮ್ಮ ತೆರಿಗೆ" ಅಭಿಯಾನದ ಅಂಗವಾಗಿ ನೇರ ಸಂವಾದದಲ್ಲಿ ಮಾತನಾಡಿದ ಮುಖ್ಯಮಂತ್ರಿಗಳು, "ನಾವು ಪ್ರಜಾಪ್ರಭುತ್ವ ಮತ್ತು ಒಕ್ಕೂಟ ವ್ಯವಸ್ಥೆಯನ್ನು ಒಪ್ಪಿಕೊಂಡ ಮೇಲೆ ಚೀನಾ ಮಾದರಿಯ ಏಕಸ್ವಾಮ್ಯ ಸಹಿಸಲು, ಅಮೇರಿಕಾದ ಅಧ್ಯಕ್ಷೀಯ ಮಾದರಿ ಆಡಳಿತ ಒಪ್ಪಿಕೊಳ್ಳಲು ಸಾಧ್ಯವಿಲ್ಲ" ಎಂದರು. ಮತ್ತು "ಸೆಸ್ ಮತ್ತು ಸರ್ಚಾರ್ಜ್‌ನಿಂದ ಸಂಗ್ರಹವಾದ ತೆರಿಗೆಯಲ್ಲಿ ಒಂದು ರೂಪಾಯಿಯನ್ನು ಕೇಂದ್ರ ರಾಜ್ಯಗಳಿಗೆ ಕೊಡುವುದಿಲ್ಲವಾದುದರಿಂದ ಅದರಲ್ಲೂ ನಾವು ಪಾಲು ಕೇಳಬೇಕು ಎಂದು ತೀರ್ಮಾನಿಸಿದ್ದೇವೆ. ಇದಕ್ಕಾಗಿ ಸಂವಿಧಾನಕ್ಕೆ ತಿದ್ದುಪಡಿ ತರಬೇಕಿದೆ. ಇದೇ ಕಾರಣಕ್ಕೆ ನಾನು 'ನನ್ನ ತೆರಿಗೆ ನನ್ನ ಹಕ್ಕು' ಎಂದು ಹೇಳುತ್ತಿದ್ದೇನೆ" ಎಂದು ಸಮರ್ಥಿಸಿದರು ಮತ್ತು "ನಾವು ನಮ್ಮ ಹಕ್ಕುಗಳಿಗಾಗಿ ಹೋರಾಟ ಮಾಡುತ್ತೇವೆ. ಒಕ್ಕೂಟ ವ್ಯವಸ್ಥೆಯಲ್ಲಿ ಇದ್ದುಕೊಂಡು ಒಕ್ಕೂಟ ವ್ಯವಸ್ಥೆಯನ್ನು ಬಲಪಡಿಸುತ್ತೇವೆ" ಎಂದರು.

**ವಿಪತ್ತು ಪರಿಹಾರ ನಿರ್ವಹಣೆಯಲ್ಲಿ ವಿಳಂಬ ಕೇಂದ್ರ ರಾಜ್ಯಗಳ ಜಟಾಪಟ:**

ರಾಷ್ಟ್ರೀಯ ವಿಪತ್ತು ನಿರ್ವಹಣಾ ನಿಧಿಯಿಂದ ಬರಪರಿಹಾರವಾಗಿ ಹಣ ನೀಡದೆ ವಿಳಂಬ ಮಾಡುತ್ತಿರುವುದನ್ನು ಪ್ರಶ್ನಿಸಿ ಕರ್ನಾಟಕವು ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದು, ಅದಕ್ಕೆ ಸುಪ್ರೀಂ ಕೋರ್ಟ್ ವಿಚಾರಣೆ ವೇಳೆ "ಅನುದಾನ ಬಿಡುಗಡೆ ಸೇರಿದಂತೆ ಯಾವುದೇ ವಿಷಯದಲ್ಲಿ ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರಗಳ ನಡುವೆ ಸಂಘರ್ಷ ಸಲ್ಲದು" ಎಂದು ಅಭಿಪ್ರಾಯಪಟ್ಟಿತು.

**ಕೇಂದ್ರದ ತನಿಖಾ ಸಂಸ್ಥೆಗಳ ದುರ್ಬಳಕೆಯ ಆರೋಪ:**

ಕೇಂದ್ರದ ಬಿಜೆಪಿ ಸರ್ಕಾರವು ವಿರೋಧ ಪಕ್ಷಗಳನ್ನು ಹತ್ತಿಕ್ಕಲು ಸಿ.ಬಿ.ಐ., ಜಾರಿ ನಿರ್ದೇಶನಾಲಯ, ಆದಾಯ ತೆರಿಗೆ ಇಲಾಖೆಯಂತಹ ತನಿಖಾ ಸಂಸ್ಥೆಗಳನ್ನು ದುರ್ಬಳಕೆ ಮಾಡಿಕೊಳ್ಳುತ್ತಿದೆ ಎಂಬ ಗಂಭೀರ ಆರೋಪವಿದೆ. ಅದನ್ನ ಪುಷ್ಟೀಕರಿಸುವಂತೆ ವಿರೋಧ ಪಕ್ಷಗಳ ನಾಯಕರ ವಿರುದ್ಧವೇ ಈ ತನಿಖಾ ಸಂಸ್ಥೆಗಳು ಕ್ರಮ ಕೈಗೊಂಡಿರುವುದು. ಜಾರಿ ನಿರ್ದೇಶನಾಲಯವು ವಿದೇಶಿ ವಿನಿಮಯ ನಿರ್ವಹಣಾ ಕಾಯಿದೆ ಹಾಗೂ ಹಣ ಅಕ್ರಮ ವರ್ಗಾವಣೆ ಕಾಯಿದೆಯಡಿ ವಿರೋಧ ಪಕ್ಷಗಳ ನಾಯಕರ ವಿರುದ್ಧವೇ ಹೆಚ್ಚಿನ ಅಂದರೆ ಶೇ. 95ರಷ್ಟು ಪ್ರಕರಣಗಳನ್ನು ದಾಖಲಿಸಲಾಗಿದೆ ಎಂದು 14 ವಿರೋಧ ಪಕ್ಷಗಳು ಸುಪ್ರೀಂ ಕೋರ್ಟ್‌ಗೆ 2023ರಲ್ಲಿ ಸಲ್ಲಿಸಿದ ಅರ್ಜಿಯಲ್ಲಿ ಹೇಳಿವೆ. ವಿವಿಧ ಮಾಧ್ಯಮ ಸಂಸ್ಥೆಗಳೂ ಕೂಡ ಇದೇ ಅಂಕಿ ಅಂಶಗಳನ್ನೇ ವರದಿ ಮಾಡಿವೆ. 2014 ರಿಂದ ಇಲ್ಲಿಯವರೆಗೆ ಇ.ಡಿ. ಅಧಿಕಾರಿಗಳು ವಿರೋಧ ಪಕ್ಷಗಳ 150 ನಾಯಕರ ಮೇಲೆ ದಾಳಿ ನಡೆಸಿದ್ದಾರೆ ಎಂದು ರಾಯಿಟರ್ಸ್ ವರದಿ ಮಾಡಿದೆ.

**ಏಕಕಾಲಿಕ ಚುನಾವಣೆ, ಒಂದು ರಾಷ್ಟ್ರ-ಒಂದು ತೆರಿಗೆ, ಒಂದು ಭಾಷೆ, ಏಕರೂಪ ನಾಗರಿಕ ಸಂಹಿತೆ, ಹಿಂದಿ ಹೇರಿಕೆ, ಏಕಪಠ್ಯಕ್ರಮ ವಿವಾದ:**

ಇತ್ತೀಚಿನ ಹೊಸ ಬೆಳವಣಿಗೆ ಎಂದರೆ ಕೇಂದ್ರ ಮತ್ತು ರಾಜ್ಯಗಳಲ್ಲಿ ಏಕಕಾಲದಲ್ಲಿ ಚುನಾವಣೆಯನ್ನು ನಡೆಸುವುದು, ಏಕರೂಪ ನಾಗರಿಕ ಸಂಹಿತೆಯನ್ನು ರೂಪಿಸುವುದು ಹಾಗೂ ಹಿಂದಿ ಭಾಷೆಯನ್ನು ಆಡಳಿತ ಭಾಷೆಯನ್ನಾಗಿ ಮಾಡಲು ಕೇಂದ್ರ ಸರ್ಕಾರವು ಮುಂದಾಗಿ, ಇವುಗಳನ್ನು ರಾಜ್ಯಗಳು ವಿಶೇಷವಾಗಿ ದಕ್ಷಿಣದ ರಾಜ್ಯಗಳು ವಿರೋಧಿಸುತ್ತವೆ. ಇವುಗಳ ವಾದವೆಂದರೆ ಪ್ರಸ್ತುತ ಕೇಂದ್ರ ಸರ್ಕಾರವು ತನ್ನ ಪಕ್ಷದ ನೆಲೆಯನ್ನು ವಿಸ್ತರಿಸುವ, ಬಹುತ್ವವನ್ನು ನಾಶ ಮಾಡುವ ಹಾಗೂ ರಾಜ್ಯಗಳ ಸ್ವಾತಂತ್ರ್ಯವನ್ನು ಹರಣ ಮಾಡುವುದಾಗಿದೆ ಎಂಬ ವಾದವಾಗಿದೆ.

**ಕೊನೆಯ ಮಾತು:**

ಮೇಲಿನ ಅಂಶಗಳನ್ನು ಗಮನಿಸಿದಾಗ ಕೇಂದ್ರ ಸರ್ಕಾರದ ಧೋರಣೆಯು ಸಂವಿಧಾನದ ರಚನಾಕಾರರ ಆಶಯವಾದಂತಹ ದೇಶದ ಏಕತೆ, ಸಮಗ್ರತೆ ಮತ್ತು ಬಹುತ್ವದ ರಕ್ಷಣೆಗಿಂತ ಆಳುವ ಪಕ್ಷದ ನೆಲೆಯನ್ನು ವಿಸ್ತರಿಸುವ, ವಿರೋಧಿ ರಾಜ್ಯ ಸರ್ಕಾರಗಳನ್ನು ನಿಯಂತ್ರಿಸುವ ಹಾಗೂ ತನ್ನ ಪಕ್ಷದ ಸಿದ್ಧಾಂತವನ್ನು ಹೇರುವುದಾಗಿದೆ ಎಂದು ಭಾಸವಾಗುತ್ತದೆ. ಹೆಚ್ಚು ಸಂಪನ್ಮೂಲಗಳು ಹಾಗೂ ಹೆಚ್ಚು ಅಧಿಕಾರವನ್ನು ಹೊಂದಿರುವ ಕೇಂದ್ರವು ದೇಶದ ಸಮಗ್ರ ಅಭಿವೃದ್ಧಿ ಹಾಗೂ ದೇಶದ ಬಹುತ್ವ, ಏಕತೆಯನ್ನು ಮತ್ತು ಸಮಗ್ರತೆಯನ್ನು ರಕ್ಷಿಸುವುದಕ್ಕೆ ತನ್ನ ಅಧಿಕಾರವನ್ನು ಬಳಸಬೇಕೇ ಹೊರತು ಕೇಂದ್ರೀಕರಣದತ್ತ ಕೊಂಡೊಯ್ಯುವುದಕ್ಕಲ್ಲ ಮತ್ತು ರಾಜ್ಯಗಳ ಸ್ವಾತಂತ್ರ್ಯ ಮತ್ತು ಸ್ವಾಯತ್ತತೆಯನ್ನು ನಾಶ ಮಾಡುವುದಕ್ಕಲ್ಲ. ಈ ಸಂದರ್ಭದಲ್ಲಿ ಕೇಂದ್ರದ ಈ ಪ್ರವೃತ್ತಿಯನ್ನು ಕುರಿತು ರಾಮಕೃಷ್ಣ ಹೆಗಡೆ ಕರ್ನಾಟಕದ ಮುಖ್ಯಮಂತ್ರಿಯಾಗಿದ್ದಂತಹ

ಸಂದರ್ಭದಲ್ಲಿ ಹೇಳಿದ ಮಾತು ಸೂಕ್ತವೆನಿಸುತ್ತದೆ: "ಒಂದು ರಾಜ್ಯದ ಮುಖ್ಯಮಂತ್ರಿಯಾಗಿ ಒಂದು ಹೆಜ್ಜೆ ಆಚೆ ಇಡಲು ಮತ್ತು ಒಂದು ಹೆಜ್ಜೆ ಈಚೆ ಇಡಲು ಆಗುತ್ತಿಲ್ಲ, ಎಲ್ಲಾ ಕಡೆ ಕೇಂದ್ರದ ಕಾನೂನುಗಳು ಇವೆ" ಎಂದಿದ್ದರು. ಅಂಬೇಡ್ಕರ್‌ರವರು ಭಾರತ ಒಕ್ಕೂಟ ವ್ಯವಸ್ಥೆಯನ್ನು ಕುರಿತು, "ಭಾರತದ ಒಕ್ಕೂಟವು ಸಂದಿಗ್ಧ ಸನ್ನಿವೇಶದಲ್ಲಿ ಏಕಾತ್ಮಕ ವ್ಯವಸ್ಥೆಯಾಗಿ, ಸಾಮಾನ್ಯ ಸಂದರ್ಭದಲ್ಲಿ ಸಂಯುಕ್ತ ವ್ಯವಸ್ಥೆಯಾಗಿ ಕಾರ್ಯನಿರ್ವಹಿಸುತ್ತದೆ" ಎಂದಿದ್ದಾರೆ. ಆದರೆ ಅದನ್ನು ಹೀಗೆ ಹೇಳಬಹುದು: ಕೇಂದ್ರ ಮತ್ತು ರಾಜ್ಯಗಳಲ್ಲಿ ಒಂದೇ ಪಕ್ಷದ ಸರ್ಕಾರವಿದ್ದಾಗ ಸಂಯುಕ್ತಾತ್ಮಕ ವ್ಯವಸ್ಥೆಯಾಗಿಯೂ, ಕೇಂದ್ರ ಮತ್ತು ರಾಜ್ಯಗಳಲ್ಲಿ ವಿಭಿನ್ನ ಪಕ್ಷಗಳು ಅಧಿಕಾರದಲ್ಲಿದ್ದಾಗ ಏಕಾತ್ಮಕ ವ್ಯವಸ್ಥೆಯಾಗಿ ಕಾರ್ಯನಿರ್ವಹಿಸುವ ಪ್ರವೃತ್ತಿಯಾಗಿ ಬೆಳವಣಿಗೆಯಾಗಿದೆ.

**ಪರಾಮರ್ಶನ ಗ್ರಂಥಗಳು:**


1. Fadia. B.L, (2010), Indian Government and Politics, Agra: Sahitya Bhavan Publications.
2. Avasthi A.P, (2023), Indian Political System, Agra: Lakshmi Narain Agarwal Educational Publishers.
3. Basu. D.D, (2001), Introduction to the Constitution of India, Gurgaon: LexisNexis.
4. ರಾಜಶೇಖರ ಹೆಚ್.ಎಂ., (2017), ಭಾರತ ಸರ್ಕಾರ ಮತ್ತು ರಾಜಕೀಯ, ಮೈಸೂರು: ಕಿರಣ್ ಪ್ರಕಾಶನ.
5. ಗಂಗಾಧರ ಪಿ.ಎಸ್., (2024), ಭಾರತ ಸಂವಿಧಾನ ಮತ್ತು ರಾಜಕೀಯ, ಬೆಂಗಳೂರು: ಚೈತ್ರ ಪ್ರಕಾಶನ.
6. ಹಾಲಪ್ಪ ಎನ್., (1998), ರಾಜ್ಯಶಾಸ್ತ್ರ, ಬೆಂಗಳೂರು: ನವೀನ್ ಪ್ರಕಾಶನ.
7. ಪ್ರವೀಣ್ ಚಕ್ರವರ್ತಿ, (2022), ಲಯ ತಪ್ಪಬಹುದು ಒಂದು ರಾಷ್ಟ್ರ ಮಂತ್ರ, ಬೆಂಗಳೂರು: ಪ್ರಜಾವಾಣಿ ದಿನಪತ್ರಿಕೆ.
8. ಪ್ರಜಾವಾಣಿ ವರದಿ, (2022), ಬಿಜೆಪಿಯೇತರ ಸರ್ಕಾರಗಳಿಗೆ ರಾಜ್ಯಪಾಲರ ರಗಳೆ, ಬೆಂಗಳೂರು: ಪ್ರಜಾವಾಣಿ ದಿನಪತ್ರಿಕೆ.
9. ಪ್ರವೀಣ್ ಬಿ.ಎಸ್., (2022), ಒಕ್ಕೂಟದ ಕಹಿಬಂಧ, ಬೆಂಗಳೂರು: ಪ್ರಜಾವಾಣಿ ದಿನಪತ್ರಿಕೆ.
10. Draupadi Murmu, (2023), Multiple Creed and Language essence of India, New Delhi: The Hindu Daily.

11. ಪ್ರಜಾವಾಣಿ ಸಂಪಾದಕೀಯ, (2023), ಕೇಂದ್ರದ ಹಸ್ತಕ್ಷೇಪ ಒಕ್ಕೂಟ ವ್ಯವಸ್ಥೆಗೆ ಬಲ ತುಂಬಿದ ಸುಪ್ರೀಂ ತೀರ್ಪುಗಳು, ಬೆಂಗಳೂರು: ಪ್ರಜಾವಾಣಿ ದಿನಪತ್ರಿಕೆ.
12. ಪ್ರಜಾವಾಣಿ ವರದಿ, (2023), ಬಿಜೆಪಿಯೇತರ ಪಕ್ಷಗಳಿರುವ ರಾಜ್ಯ ಸರ್ಕಾರಗಳಿಗೆ ರಾಜ್ಯಪಾಲರ ಕಿರುಕುಳ, ಬೆಂಗಳೂರು: ಪ್ರಜಾವಾಣಿ ದಿನಪತ್ರಿಕೆ.
13. ಪ್ರಜಾವಾಣಿ ವಾರ್ತೆ, (2023), ಬೆಂಕಿ ಜೊತೆ ಆಟ – ಸುಪ್ರೀಂ, ಬೆಂಗಳೂರು: ಪ್ರಜಾವಾಣಿ ದಿನಪತ್ರಿಕೆ.
14. ಪ್ರಜಾವಾಣಿ ವರದಿ, (2023), ತಡೆ ಹಿಡಿದ ಮಸೂದೆ ರಾಷ್ಟ್ರಪತಿಗೆ ಕಳುಹಿಸುವಂತಿಲ್ಲ – ಸುಪ್ರೀಂ ಕೋರ್ಟ್, ಬೆಂಗಳೂರು: ಪ್ರಜಾವಾಣಿ ದಿನಪತ್ರಿಕೆ.
15. ಪ್ರಜಾವಾಣಿ ವರದಿ, (2024), ರಾಜ್ಯಪಾಲರಿಗಿಲ್ಲ ವಿವೇಚನಾಧಿಕಾರ – ಸುಪ್ರೀಂ ಕೋರ್ಟ್, ಬೆಂಗಳೂರು: ಪ್ರಜಾವಾಣಿ ದಿನಪತ್ರಿಕೆ.
16. ಪ್ರಜಾವಾಣಿ ವಾರ್ತೆ, (2024), ಸೆಸ್ ಮತ್ತು ಸರ್ಚಾರ್ಜ್‌ನಲ್ಲೂ ಪಾಲು ನೀಡಬೇಕು ಕರ್ನಾಟಕದ ಸಿಎಂ, ಬೆಂಗಳೂರು: ಪ್ರಜಾವಾಣಿ ದಿನಪತ್ರಿಕೆ.
17. ಪ್ರಜಾವಾಣಿ ವರದಿ, (2024), ರಾಷ್ಟ್ರ ರಾಜಧಾನಿಯಲ್ಲಿ 'ಮೆರೆದ' ರಾಜ್ಯದ ಕಳಕಳಿ, ಬೆಂಗಳೂರು: ಪ್ರಜಾವಾಣಿ ದಿನಪತ್ರಿಕೆ.
18. ಪ್ರಜಾವಾಣಿ ವರದಿ, (2024), ಕೇಂದ್ರದ ವಿರುದ್ಧ ಎಡ ಪಕ್ಷಗಳ ಪ್ರತಿಭಟನೆ, ಬೆಂಗಳೂರು: ಪ್ರಜಾವಾಣಿ ದಿನಪತ್ರಿಕೆ.
19. ಪ್ರಜಾವಾಣಿ ವರದಿ, (2024), ಕೇಂದ್ರದ ತನಿಖಾ ಸಂಸ್ಥೆಗಳ ದುರ್ಬಳಕೆ ಆರೋಪದ ಸುತ್ತ, ಬೆಂಗಳೂರು: ಪ್ರಜಾವಾಣಿ ದಿನಪತ್ರಿಕೆ.
20. ಪ್ರಜಾವಾಣಿ ವರದಿ, (2025), ರಾಷ್ಟ್ರಪತಿಗೆ 3 ತಿಂಗಳ ಗಡುವು, ಬೆಂಗಳೂರು: ಪ್ರಜಾವಾಣಿ ದಿನಪತ್ರಿಕೆ.
21. ದೇವನೂರು ಮಹಾದೇವ, (2025), ರಾಜ್ಯಗಳ ಕಾಲಿಗೆ ತೆರಿಗೆಯ ಗುಂಡು, ಬೆಂಗಳೂರು: ಪ್ರಜಾವಾಣಿ ದಿನಪತ್ರಿಕೆ.